# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 11-5-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಯುದ್ಧ ಹೊರತಾಗಿಯೂ ಯುಕ್ರೈನ್ ಎಪ್ರಿಲ್‌ನಲ್ಲಿ 1 ಮಿಲಿಯನ್ ಟನ್ ಜೋಳ ರಫ್ತು

ಯುದ್ಧದ ಹೊರತಾಗಿಯೂ ಯುಕ್ರೈನ್ ಎಪ್ರಿಲ್‌ನಲ್ಲಿ 1.09 ಮಿಲಿಯನ್ ಟನ್ ಜೋಳ ರಫ್ತು ಮಾಡಿದೆಯೆನ್ನಲಾಗಿದೆ. ಯುಕ್ರೈನ್‌ನಲ್ಲಿ ಜೋಳ ಬಿತ್ತನೆಯಾಗುತ್ತಿದ್ದು ಹಿಂದಿನ ವರ್ಷ ಇದೇ ಅವಧಿಯ ಬಿತ್ತನೆಗಿಂತ 25–30 ಶೇಕಡಾ ಬಿತ್ತನೆಯ ವಿಸ್ತೀರ್ಣ ಕಡಿಮೆಯಾಗಿದೆಯೆನ್ನಲಾಗಿದೆ. 2020–21 ರಲ್ಲಿ ಯುಕ್ರೈನ್ ಜಾಗತಿಕ 4 ನೇ ಅತಿದೊಡ್ಡ ಜೋಳ ರಫ್ತು ಹಾಗೂ 6 ನೇ ಗೋಧಿ ರಫ್ತು ದೇಶವಾಗಿದೆ.

## ಸೋಯಾಬೀನ್ ಆಮದು ಇಳಿಕೆ

ಸೋಯಾಬೀನ್ ಅರೆಯುವಿಕೆ ಇಳಿಕೆ ಹಾಗೂ ಸೋಯಾಬೀನ್ ಮೀಲ್ ಮಾರಾಟ ಇಳಿಕೆಯಿಂದಾಗಿ ಭಾರತದ ಮಿಲ್‌ಗಳು ಸೋಯಾಬೀನ್ ಆಮದು ಕಡಿಮೆ ಮಾಡಿದೆಯೆನ್ನಲಾಗಿದೆ. ಯುರೋಪಿನ ದೇಶಗಳು ಜುಲೈ 1 ರಿಂದ ಈ ವರೆಗೆ 13.93 ಮಿಲಿಯನ್ ಸೋಯಾಮೀಲ್ ಆಮದು ಮಾಡಿದ್ದು, ಇದು ಹಿಂದಿನ ವರ್ಷದ ಈ ಅವಧಿಯ ಆಮದಿಗಿಂತ 6 ಶೇಕಡಾ ಕಡಿಮೆಯೆನ್ನಲಾಗಿದೆ. ಬ್ರೆಜಿಲ್‌ನ ಮೇ ತಿಂಗಳ ಸೋಯಾಬೀನ್ ರಫ್ತು ಅಂದಾಜು 8 ಮಿಲಿಯನ್ ಟನ್‌ಗಿಂತ 10.6 ಮಿಲಿಯನ್ ಟನ್‌ಗಳಿಗೇರಿಸಲಾಗಿದೆಯೆನ್ನಲಾಗಿದೆ. ಬ್ರೆಜಿಲ್‌ನ 2021–22 ರ ಸೋಯಾಬೀನ್ ಉತ್ಪಾದನಾ ಅಂದಾಜನ್ನು 125.4 ಮಿಲಿಯನ್ ಟನ್‌ಗಳಿಗೇರಿಸಿದ ಅಲ್ಲಿನ ಖಾದ್ಯತೈಲ ಕೈಗಾರಿಕೆಗಳು ಮತ್ತೊಂದು ಬ್ರೆಜಿಲ್‌ನ ಕನ್ಸಲ್ಟೆನ್ಸಿ 119.7 ಮಿಲಿಯನ್ ಸೋಯಾಬೀನ್ ಉತ್ಪಾದನಾ ಅಂದಾಜು ಮಾಡಿದೆ.

## ಖಾದ್ಯತೈಲ ದರ ಹೆಚ್ಚಳದಿಂದ ಆಮದು ಇಳಿಕೆ

ದಾಖಲೆ ದರ ಹೆಚ್ಚಳವಾದ್ದರಿಂದ ಈ ವರ್ಷ 2021–2022 ಅಕ್ಟೋಬರ್ ಅವಧಿಯ ಭಾರತದ ಖಾದ್ಯತೈಲ ಆಮದು ಹಿಂದಿನ ವರ್ಷದ 13.13 ಮಿಲಿಯನ್ ಟನ್‌ಗಳಿಂದ 12.9 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಬಹುದೆಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್‌ನ ಕಾರ್ಯಕಾರಿ ನಿರ್ದೇಶಕ **ಬಿ.ವಿ.ಮೆಹ್ತಾ** ಹೇಳಿದ್ದಾರೆನ್ನಲಾಗಿದೆ. ಉತ್ತಮ ಮಳೆಯಿಂದ ದೇಶೀಯವಾಗಿ 1.5 ಮಿಲಿಯನ್ ಟನ್ ಖಾದ್ಯತೈಲಗಳ ಲಭ್ಯತೆಯೂ ಆಮದು ಇಳಿಕೆಗೆ ಸಹಾಯಕವೆನ್ನಲಾಗಿದೆ. ಜನಸಂಖ್ಯಾ ಹೆಚ್ಚಳ, ಆದಾಯ ಹೆಚ್ಚಳಗಳಿಂದ ಭಾರತದ ಖಾದ್ಯತೈಲ ಬಳಕೆ 2 ದಶಕಗಳಲ್ಲಿ ಮೂರು ಪಟ್ಟು ಹೆಚ್ಚಳಗೊಂಡಿದೆಯೆನ್ನಲಾಗಿದೆ.